ಕರ್ನಾಟಕ ವಿಧಾನ ಸಭೆ

ಹದಿನಾಲ್ಕನೇ ವಿಧಾನಸಭೆ

ಹತ್ತನೇ ಅಧಿವೇಶನ

ಲಘು ಪ್ರಕಟಣೆ ಭಾಗ – II

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶನಿವಾರ, ದಿನಾಂಕ: 2ನೇ ಜುಲೈ, 2016

ಕ್ರಮ ಸಂಖ್ಯೆ: 223

ಶಾಸಕರ ಜ್ಞಾನಾರ್ಜನೆಗೆ ಲಭ್ಯವಿರುವ ಸೇವೆಗಳು

ಕರ್ನಾಟಕ ವಿಧಾನಮಂಡಲದ ಇ-ಗ್ರಂಥಾಲಯ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಗಣಕ ಕೇಂದ್ರ ಮತ್ತು ಸೂಚನಾ ಪತ್ರ ಶಾಖೆಗಳಲ್ಲಿ ಮಾನ್ಯ ಸದಸ್ಯರಿಗೆ ಲಭ್ಯವಿರುವ ಸೌಲಭ್ಯಗಳು ಕೆಳಕಂಡಂತಿವೆ:

ಅ. ಗ್ರಂಥಾಲಯ ಶಾಖೆ

ಕರ್ನಾಟಕ ವಿಧಾನ ಮಂಡಲದ ಇ-ಗ್ರಂಥಾಲಯವು ವಿಧಾನಸೌಧದ ನೆಲಮಹಡಿಯ ಕೊಠಡಿ ಸಂಖ್ಯೆ:28ರಲ್ಲಿ ಇರುತ್ತದೆ. ಈ ಗ್ರಂಥಾಲಯದಲ್ಲಿ ಮಾನ್ಯ ಸದಸ್ಯರಿಗೆ ಕೆಳಕಂಡ ಪುಸ್ತಕಗಳು, ನಡವಳಿಕೆಗಳು, ನಿಯತಕಾಲಿಕೆಗಳು, ದಿನಪತ್ರಿಕೆಗಳು, ಕೇಂದ್ರ ಹಾಗೂ ರಾಜ್ಯ ಪತ್ರಗಳು ಲಭ್ಯವಿರುತ್ತವೆ.

1. ಪುಸ್ತಕಗಳು

ರಾಜಕೀಯ ಶಾಸ್ತ್ರ, ಇತಿಹಾಸ, ಪೌರನೀತಿ ಶಾಸ್ತ್ರ, ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಕಾಯ್ದೆ ಮತ್ತು ನಿಯಮಗಳ ಪುಸ್ತಕ, ಕರ್ನಾಟಕ ಶಾಸಕಾಂಗದ ಇತಿಹಾಸದ ಪುಸ್ತಕಗಳು, ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಿಯಮ ಮತ್ತು ಕಾನೂನುಗಳ ಪುಸ್ತಕಗಳು, ಭೌಗೋಳಿಕ ಶಾಸ್ತ್ರ, ಜೀವನ ಚರಿತ್ರೆ, ಆತ್ಮ ಚರಿತ್ರೆ, ಧರ್ಮ ಶಾಸ್ತ್ರ, ಮನಃ ಶಾಸ್ತ್ರ, ಶಿಕ್ಷಣ,

ವಿಶ್ವಕೋಶಗಳು, ಸಮಿತಿಯ ವರದಿಗಳು, ನಿಘಂಟುಗಳು, ಗೆಜೆಟಿಯರ್, ಸಾಮಾಜಿಕ ವಿಜ್ಞಾನ, ಸಾಮಾಜಿಕ ಶಾಸ್ತ್ರ, ಅರ್ಥಶಾಸ್ತ್ರ, ಭಾಷಾಶಾಸ್ತ್ರ, ಇತರ ರಾಷ್ಟ್ರಗಳ ಇತಿಹಾಸ ಹಾಗೂ ಸಂವಿಧಾನ, ಕೇಂದ್ರ ಹಾಗೂ ಕರ್ನಾಟಕ ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕಗಳು, ಎಲ್ಲಾ ಜಿಲ್ಲೆಗಳ ಮಾಹಿತಿಯನ್ನು ಒಳಗೊಂಡ ಗೆಜೆಟಿಯರ್ಸ್ ಹಾಗೂ ಇತರ ಪುಸ್ತಕಗಳು ಪರಾಮರ್ಶೆಗಾಗಿ ಲಭ್ಯವಿರುತ್ತದೆ.

2. ನಡವಳಿಕೆಗಳು

ಕರ್ನಾಟಕ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ 1881 ರಿಂದ 2013ರವರೆಗಿನ ನಡವಳಿಗಳು, 1955 ರಿಂದ 2012ರವರೆಗಿನ ಲೋಕಸಭೆಯ ನಡವಳಿಗಳು, 1953 ರಿಂದ 2012ರವರೆಗಿನ ರಾಜ್ಯ ಸಭೆಯ ನಡವಳಿಗಳು, ಭಾರತದ ಸಂವಿಧಾನ ರಚನಾ ಸಮಿತಿಯ ನಡವಳಿಕೆಗಳು, ಹೌಸ್ ಆಫ್ ಕಾಮನ್ಸ್ (Volume 1 to 550) ಹಾಗೂ ಹೌಸ್ ಆಫ್ ಲಾರ್ಡ್ಸ್‌ನ(Volume 1 to 350) ನಡವಳಿಕೆಗಳು ಗ್ರಂಥಾಲಯದಲ್ಲಿ ಪರಾಮರ್ಶೆಗಾಗಿ ಲಭ್ಯವಿರುತ್ತದೆ.

3. ದಿನ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು

ವಿಧಾನಸೌಧದಲ್ಲಿರುವ ವಿಧಾನಮಂಡಲ ಗ್ರಂಥಾಲಯದ ವಾಚನಾಲಯ ಹಾಗೂ ಶಾಸಕರ ಭವನದ ವಾಚನಾಲಯದಲ್ಲಿ 20 ದಿನಪತ್ರಿಕೆಗಳು, 18 ವಾರ ಪತ್ರಿಕೆಗಳು, 6 ಪಾಕ್ಷಿಕ ಪತ್ರಿಕೆಗಳು, 30 ಮಾಸಿಕ ಪತ್ರಿಕೆಗಳು ಲಭ್ಯವಿರುತ್ತದೆ.

4. ರಾಜ್ಯ ಪತ್ರಗಳು

ವಿಧಾನಸೌಧದಲ್ಲಿರುವ ವಿಧಾನಮಂಡಲ ಗ್ರಂಥಾಲಯದ ವಾಚನಾಲಯದಲ್ಲಿ 1952 ರಿಂದ 2015ರವರೆಗಿನ 12,810 ಕರ್ನಾಟಕ ರಾಜ್ಯ ಪತ್ರಿಕೆಗಳು ಹಾಗೂ 1935 ರಿಂದ 2015ರವರೆಗಿನ 12,360 ಕೇಂದ್ರ ರಾಜ್ಯ ಪತ್ರಿಕೆಗಳು (ಗೆಜೆಟ್) ಪರಾಮರ್ಶೆಗಾಗಿ ಲಭ್ಯವಿರುತ್ತದೆ.

ಆ. ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ವಿಧಾನಸೌಧದ ನೆಲಮಹಡಿಯಲ್ಲಿರುವ ಕೊಠಡಿ ಸಂಖ್ಯೆ:19ರಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಶಾಖೆಯು ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಗಳ ಉಪಯೋಗಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದು, ಆಡಳಿತಾತ್ಮಕವಾಗಿ ವಿಧಾನಸಭಾ ಸಚಿವಾಲಯದ ವ್ಯಾಪ್ತಿಯಲ್ಲಿದೆ. ಈ ಶಾಖೆಯು ಪ್ರಮುಖವಾಗಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಿದೆ.

1. ದಿನ ಪತ್ರಿಕೆಗಳಲ್ಲಿ ಪ್ರಕಟವಾಗುವ ಪತ್ರಿಕಾ ತುಣುಕುಗಳ ಸಂಗ್ರಹಣೆ

ರಾಜ್ಯದಲ್ಲಿ ಪ್ರಸಾರವಾಗುತ್ತಿರುವ ಕೆಳಕಂಡ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಪ್ರಮುಖ ಸುದ್ದಿಗಳನ್ನು ಇಲಾಖಾವಾರು ಪ್ರತ್ಯೇಕಿಸಿ ಸಂಗ್ರಹಿಸಲಾಗುತ್ತದೆ;

ಕನ್ನಡ:

1. ಪ್ರಜಾವಾಣಿ
2. ಉದಯವಾಣಿ
3. ವಿಜಯ ಕರ್ನಾಟಕ
4. ವಿಜಯವಾಣಿ
5. ಸಂಯುಕ್ತ ಕರ್ನಾಟಕ
6. ಕನ್ನಡ ಪ್ರಭ

ಇಂಗ್ಲಿಷ್:

1. ಡೆಕ್ಕನ್ ಹೆರಾಲ್ಡ್
2. ಇಂಡಿಯನ್ ಎಕ್ಸ್‌ಪ್ರೆಸ್
3. ದಿ ಹಿಂದು
4. ಟೈಮ್ಸ್ ಆಫ್ ಇಂಡಿಯಾ

ಮೇಲ್ಕಂಡ ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಗಳನ್ನು ಆಧರಿಸಿ ಕೆಳಕಂಡ ಎರಡು ಪತ್ರಿಕೆಗಳನ್ನು ಹೊರತರಲಾಗುತ್ತಿದೆ.

ಎ. ಕರ್ನಾಟಕ ಶಾಸಕಾಂಗ ಪತ್ರಿಕೆ(ತ್ರೈಮಾಸಿಕ ಪತ್ರಿಕೆ)

ಕರ್ನಾಟಕ ವಿಧಾನ ಪರಿಷತ್, ವಿಧಾನ ಸಭೆ, ರಾಜ್ಯ ಸರ್ಕಾರ, ಸಂಸತ್, ಕೇಂದ್ರ ಸರ್ಕಾರ, ಇತರೆ ರಾಜ್ಯ ಸರ್ಕಾರಗಳು/ವಿಧಾನ ಮಂಡಲಗಳು, ನ್ಯಾಯಾಂಗ, ಅಂತರರಾಷ್ಟ್ರೀಯ ಮುಂತಾದ ವಿಚಾರಗಳನ್ನು ಒಳಗೊಂಡಂತೆ ವಿವಿಧ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಸುದ್ದಿಗಳನ್ನು ಆಧರಿಸಿ ಪ್ರತಿ ಮೂರು ತಿಂಗಳಿಗೊಮ್ಮೆ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿದೆ.

ಬಿ. ಲೇಖನ ಸೂಚಿ

ವಿವಿಧ ದಿನಪತ್ರಿಕೆಗಳು ಹಾಗೂ ಪ್ರಮುಖ ಆಂಗ್ಲ ನಿಯತಕಾಲಿಕೆಗಳಲ್ಲಿ (ಯೋಜನಾ, Outlook, Frontline, Business of India, Time, Economic & Political Weekly, India today, The Week) ಪ್ರಕಟವಾಗುವ ಉತ್ತಮ ಹಾಗೂ ಪ್ರಮುಖ ಲೇಖನಗಳನ್ನು ಸಂಗ್ರಹಿಸಲಾಗುತ್ತಿದೆ. ಅವುಗಳನ್ನು ಪರಾಮರ್ಶಿಸುವ ಸಲುವಾಗಿ ಹಾಗೂ ಸುಲಭವಾಗಿ ಲಭ್ಯವಾಗುವಂತೆ ಮಾಡಲು ಅವುಗಳನ್ನು ವಿಷಯಾವಾರು ವಿಂಗಡಿಸಿ, ಪ್ರತಿ ತಿಂಗಳು ಒಂದು ಲೇಖನ ಸೂಚಿಯನ್ನು ಪ್ರಕಟಿಸಲಾಗುತ್ತಿದೆ. ಲೇಖನಗಳ ಪ್ರತಿಗಳು ಶಾಖೆಯಲ್ಲಿ ಲಭ್ಯವಿರುತ್ತದೆ.

1976 ರಿಂದ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಹಾಗೂ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಗಳನ್ನು ಸಂಪೂರ್ಣವಾಗಿ ಪುಸ್ತಕ ರೂಪದಲ್ಲಿ ಸಂಗ್ರಹಿಸಿಡಲಾಗಿದೆ(Bounded Volume). 2016ರ ಮಾರ್ಚ್ ತಿಂಗಳಿನಿಂದ ಪ್ರಜಾವಾಣಿ, ಕನ್ನಡ ಪ್ರಭ ಹಾಗೂ ದಿ ಹಿಂದು ದಿನಪತ್ರಿಕೆಗಳನ್ನು ಸಂಗ್ರಹಿಸಿಡಲಾಗುತ್ತಿದೆ.

2. ಪುನರಾವಲೋಕನ ಪುಸ್ತಕ

(A REVIEW Of KARNATAKA LEGISLATIVE ASSEMBLY AND LEGISLATIVE COUNCIL)

ಪ್ರತಿ ವಿಧಾನಸಭೆಯ ಅವಧಿಯಲ್ಲಿ ಕರ್ನಾಟಕ ವಿಧಾನಸಭೆ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ನಡೆದ ಕಾರ್ಯಚಟುವಟಿಕೆಗಳ ಸಂಪೂರ್ಣ ಮಾಹಿತಿಯನ್ನು ಒಳಗೊಂಡ ಪುನರಾವಲೋಕನ ಪುಸ್ತಕವನ್ನು ಮುದ್ರಿಸಿ ಪ್ರಕಟಿಸಲಾಗುತ್ತಿದೆ. 2ನೇ ವಿಧಾನ ಸಭೆಯಿಂದ 13ನೇ ವಿಧಾನ ಸಭೆಯವರೆಗಿನ ಹಾಗೂ 1962 ರಿಂದ 2013ರವರೆಗಿನ ವಿಧಾನ ಪರಿಷತ್ತಿನ ಪುನರಾವಲೋಕನ ಪುಸ್ತಕಗಳು ಈಗಾಗಲೇ ಪ್ರಕಟವಾಗಿರುತ್ತದೆ.

3. ಸಚಿವ ಸಂಪುಟ ಸದಸ್ಯರ ವಿವರ

(Council of Ministers of Karnataka)

ಕರ್ನಾಟಕ ರಾಜ್ಯದಲ್ಲಿ 1947ರಿಂದ 2014ರವರೆಗೆ ಕಾರ್ಯನಿರ್ವಹಿಸಿರುವ ಸಚಿವ ಸಂಪುಟ ಸದಸ್ಯರ ವಿವರಗಳನ್ನು ಒಳಗೊಂಡ ಎರಡು ಸಂಪುಟಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು / ಕ್ಯಾಬಿನೆಟ್ ಮಂತ್ರಿಗಳು / ರಾಜ್ಯ ಮಂತ್ರಿಗಳ ನೇಮಕ, ಕಾರ್ಯಹಂಚಿಕೆ ಮತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಕ್ಕೆ ಸಂಬಂಧಪಟ್ಟ ವಿವರಗಳನ್ನು ಅಳವಡಿಸಲಾಗಿದೆ.

4. 14ನೇ ವಿಧಾನ ಸಭಾ ಸದಸ್ಯರ ಸಂಕ್ಷಿಪ್ತ ವ್ಯಕ್ತಿ ಪರಿಚಯ

(Brief Profile of Members of the 14th Legislative Assembly)

ಈ ಕಿರುಹೊತ್ತಿಗೆಯಲ್ಲಿ 14ನೇ ವಿಧಾನ ಸಭೆಯ ಸದಸ್ಯರ ವೈಯಕ್ತಿಕ ವಿವರಗಳನ್ನು ಅವರ ಭಾವಚಿತ್ರದೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪ್ರಕಟಿಸಲಾಗಿರುತ್ತದೆ. ಇದರಲ್ಲಿ 14ನೇ ವಿಧಾನ ಸಭಾ ಸದಸ್ಯರ ವಿವರಗಳಲ್ಲದೇ ಪೀಠಾಸೀನಾಧಿಕಾರಿಗಳ ವಿವರ, ಮಹಿಳಾ ಸದಸ್ಯರು, ಸದಸ್ಯರ ಸದಸ್ಯತ್ವ ಅವಧಿ ಹಾಗೂ ವಿಧಾನ ಸಭೆಯ ಅವಧಿ, ಪಕ್ಷಗಳ ಬಲಾಬಲ, ವಿಧಾನ ಸಭಾ ಸದಸ್ಯರ ವಿದ್ಯಾರ್ಹತೆಯ ಸಂಕ್ಷಿಪ್ತ ವಿವರಗಳನ್ನು ಹಾಗೂ ಕರ್ನಾಟಕ ಸರ್ಕಾರದ ಮಂತ್ರಿಮಂಡಲದ ಸದಸ್ಯರ ಹೆಸರು, ಖಾತೆ ಹಾಗೂ ವಿಳಾಸಗಳ ಮಾಹಿತಿಯನ್ನು ಅಳವಡಿಸಲಾಗಿದೆ.

5. ವ್ಯಕ್ತಿ ಪರಿಚಯ **(Who's who)**

2ನೇ ವಿಧಾನ ಸಭೆಯಿಂದ 14ನೇ ವಿಧಾನ ಸಭೆ ಹಾಗೂ 1959 ರಿಂದ 2013ರ ಅವಧಿಯಲ್ಲಿ ಸದಸ್ಯರಾಗಿದ್ದಂತಹವರ ಪರಿಚಯ ಪುಸ್ತಕಗಳು (who's who) ಶಾಖೆಯಲ್ಲಿ ಪರಾಮರ್ಶೆಗಾಗಿ ಲಭ್ಯವಿರುತ್ತದೆ.

6. ಸದಸ್ಯರು ಹಾಗೂ ಮಾಜಿ ಸದಸ್ಯರಿಗೆ ಒದಗಿಸಲಾಗಿರುವ ಸೌಲಭ್ಯಗಳ ವಿವರಗಳ ಕಿರುಹೊತ್ತಿಗೆ

(Facilities to the Members and Ex-Members of Karnataka Legislature)

ಕರ್ನಾಟಕ ವಿಧಾನ ಮಂಡಲದ ಸದಸ್ಯರ ವೇತನ, ನಿವೃತ್ತಿ ವೇತನ ಮತ್ತು ಭತ್ಯೆಗಳ ಅಧಿನಿಯಮ, 1956 ಮತ್ತು ಅದರಡಿ ಮಾಡಲಾಗಿರುವ ನಿಯಮಗಳ ಮೇರೆಗೆ ವಿಧಾನ ಸಭೆ / ವಿಧಾನ ಪರಿಷತ್ತಿನ ಹಾಲಿ ಸದಸ್ಯರು, ಮಾಜಿ ಸದಸ್ಯರು ಹಾಗೂ ಅವರ ಕುಟುಂಬ ವರ್ಗದವರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರಗಳನ್ನು ಈ ಕಿರುಹೊತ್ತಿಗೆಯಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

ಇದರ ಜೊತೆಗೆ ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ 1956ಕ್ಕೆ ಆಗಿಂದಾಗ್ಗೆ ತರುತ್ತಿರುವ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಪುಸ್ತಕವನ್ನು ಪ್ರಕಟಿಸಲಾಗುತ್ತಿದೆ.(ಇತ್ತೀಚೆಗೆ ಮಾಡಲಾಗಿರುವ ತಿದ್ದುಪಡಿಗಳನ್ನು ಅಳವಡಿಸಿ ಮುದ್ರಿಸಲು ಕರಡನ್ನು ಸರ್ಕಾರಿ ಮುದ್ರಣಾಲಯಕ್ಕೆ ಕಳುಹಿಸಲಾಗಿದೆ).

7. ಕರ್ನಾಟಕ ವಿಧಾನ ಸಭಾ ಸದಸ್ಯರುಗಳ ಇ-ಮೇಲ್ ವಿಳಾಸ

(E-Mail Address of Members of Karnataka Legislative Assembly)

ಮಾನ್ಯ ಸದಸ್ಯರುಗಳಿಗೆ ವಿಧಾನ ಸಭಾ ಅಧಿವೇಶನ, ಸಮಿತಿ ಸಭೆಗಳು ಮುಂತಾದ ಉಪಯುಕ್ತ ಮಾಹಿತಿಯನ್ನು ವಿಧಾನ ಸಭಾ ಸಚಿವಾಲಯದ ವತಿಯಿಂದ ಶೀಘ್ರವಾಗಿ ಒದಗಿಸಲು ಹಾಗೂ ಇಂಟರ್ ನೆಟ್ ಮೂಲಕ ವ್ಯವಹರಿಸಲು ಅನುಕೂಲವಾಗುವಂತೆ ಆಯಾಯ ವಿಧಾನ ಸಭಾ ಕ್ಷೇತ್ರದ ಹೆಸರಿನಲ್ಲಿ ಗಣಕ ಕೇಂದ್ರದಿಂದ ಸೃಜಿಸಲಾಗಿರುವ ಇ-ಮೇಲ್ ಖಾತೆಗೆ ಸಂಬಂಧಿಸಿದ ವಿವರಗಳನ್ನು ಹಾಗೂ ಇ-ಮೇಲ್ ಬಳಸುವುದಕ್ಕೆ ಸಂಬಂಧಪಟ್ಟ ವಿಧಾನವನ್ನು ಒಳಗೊಂಡಿರುವ ಕಿರುಹೊತ್ತಿಗೆಯನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಹೊರತರಲಾಗಿದೆ.

8. ರಾಷ್ಟ್ರದ ಹಾಗೂ ರಾಜ್ಯದ ಉನ್ನತ ಹುದ್ದೆಗಳನ್ನು ಅಲಂಕರಿಸಿದ ಗಣ್ಯ ವ್ಯಕ್ತಿಗಳ ಅಧಿಕಾರಾವಧಿಯ ಕೈಪಿಡಿ

ರಾಷ್ಟ್ರದ ಹಾಗೂ ರಾಜ್ಯದ ಪ್ರಮುಖ ಸ್ಥಾನಗಳನ್ನು ಅಲಂಕರಿಸಿರುವ ವ್ಯಕ್ತಿಗಳು, ರಾಷ್ಟ್ರದ ಉನ್ನತ ಹುದ್ದೆಗಳನ್ನು ಅಲಂಕರಿಸಿದ ರಾಜ್ಯದ ವ್ಯಕ್ತಿಗಳು ಹಾಗೂ ಅವರ ಅಧಿಕಾರದ ಅವಧಿ, ಲೋಕಸಭೆ ಹಾಗೂ ಕರ್ನಾಟಕ ವಿಧಾನ ಸಭೆ ಅವಧಿಯ ಮಾಹಿತಿಯನ್ನು ಅಳವಡಿಸಿರುವ ಕೈಪಿಡಿಯನ್ನು ಮುದ್ರಿಸಿ ಪ್ರಕಟಿಸಲಾಗಿದೆ.(ಆಗಸ್ಟ್ 2015ರವರೆಗಿನ ಮಾಹಿತಿ)

9. ಮಾಹಿತಿ ಕೈಪಿಡಿ ಹಾಗೂ A Brochure on Karnataka

ಕರ್ನಾಟಕ ರಾಜ್ಯದ ಭೌಗೋಳಿಕ ವೈಶಿಷ್ಟ್ಯಗಳು, ಅದರ ಚರಿತ್ರೆ, ಪ್ರವಾಸೋದ್ಯಮ ಮತ್ತು ಪ್ರವಾಸಿ ತಾಣಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಒಳಗೊಂಡ ಮಾಹಿತಿ ಕೈಪಿಡಿ ಹಾಗೂ **A Brochure on Karnataka** ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಇದರಲ್ಲಿ ಕರ್ನಾಟಕ ವಿಧಾನ ಮಂಡಲದ ಉಗಮ, ಕರ್ನಾಟಕ ಸರ್ಕಾರದ ಆಡಳಿತ ವ್ಯವಸ್ಥೆ ಹಾಗೂ ವಿಧಾನ ಮಂಡಲದ ಕಾರ್ಯಚಟುವಟಿಕೆಗಳ ಕಟ್ಟಡವಾದ ವಿಧಾನಸೌಧ, ಬೆಳಗಾವಿಯಲ್ಲಿರುವ ಸುವರ್ಣ ವಿಧಾನಸೌಧಕ್ಕೆ ಸಂಬಂಧಿಸಿದ ಮಾಹಿತಿಗಳು ಒಳಗೊಂಡಿರುತ್ತದೆ.

10. ಕಿರುಹೊತ್ತಿಗೆಗಳು (Brouchers)

ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳು ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದ ಕೆಳಕಂಡ 32 ಕಿರುಹೊತ್ತಿಗೆಗಳನ್ನು ಪ್ರಕಟಿಸಲಾಗಿದೆ;

1. Facilities to the Members of the Karnataka Legislature
2. Legislators' Home
3. Adjournment Motion
4. Question Hour
5. Calling Attention to matters of Urgent Public Importance
6. Discussion On Matters Of Urgent Public Importance for short duration
7. Non-Official Resolutions
8. How a Bill becomes an Act
9. Reporting in Legislative Assembly

10. Editing of Debates in Legislative Assembly
11. Library, Reference and Research service
12. Committee on Public Accounts
13. Committee on Public Undertakings
14. Committee on Estimates
15. Committee on the Welfare of Backward Classes and Minorities
16. Committee on the Welfare of Scheduled Castes and Scheduled Tribes
17. Committee on Welfare of Women and Children
18. Committee on Papers Laid on the Table
19. Committee on Sub-Ordinate Legislation
20. Committee on Petitions, Legislative Assembly
21. Committee on Government Assurances, Legislative Assembly
22. Committee of Privileges, Legislative Assembly
23. Committee on Private Members' Bills & Resolutions, Legislative Assembly
24. Select and Joint Select Committees
25. Committee of Privileges, Legislative Council
26. Committee on Petitions, Legislative Council
27. Committee on Government Assurances, Legislative Council
28. Committee on Private Members' Bills and Resolutions, Legislative Council
29. Legislators' Home
30. Departmentally Related Subject Committees
31. Computer Centre
32. Committee on Local Bodies and Panchayat Raj Institutions

11. ಆಯವ್ಯಯ ಭಾಷಣ ಹಾಗೂ ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಗಳು

ರಾಜ್ಯದಲ್ಲಿ 1952 ರಿಂದ 2016ರವರೆಗೂ ಜಂಟಿ ಸದನಗಳನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿರುವ ಭಾಷಣದ ಪ್ರತಿಗಳು ಹಾಗೂ ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿಗಳು/ಮಂತ್ರಿಗಳು ವಿಧಾನ ಸಭೆಯಲ್ಲಿ ಮಂಡಿಸಿರುವ ರಾಜ್ಯದ ಆಯವ್ಯಯದ ಭಾಷಣದ ಪ್ರತಿಗಳು ಶಾಖೆಯಲ್ಲಿ ಪರಾಮರ್ಶೆಗಾಗಿ ಲಭ್ಯವಿರುತ್ತದೆ.

12. ಸಮಿತಿಯ ವರದಿಗಳು

ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳು ಆಗಿಂದಾಗ್ಗೆ ಸದನಗಳಿಗೆ ಸಲ್ಲಿಸುವ ವರದಿಯ ಪ್ರತಿಗಳು ಶಾಖೆಯಲ್ಲಿ ಲಭ್ಯವಿರುತ್ತದೆ.

13. ಪೀಠಾಸೀನಾಧಿಕಾರಿಗಳ ಸಮ್ಮೇಳನದ ನಡವಳಿಗಳು

ಲೋಕಸಭೆಯಿಂದ ನಡೆಸಲಾಗುವ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದ ಕುರಿತು ನಡವಳಿಗಳು ಹಾಗೂ ಭಾಷಣಗಳ ಕೆಲವು ಪ್ರತಿಗಳು ಲಭ್ಯವಿರುತ್ತವೆ.

14. ನಡವಳಿಗಳು

1952 ರಿಂದ ಕರ್ನಾಟಕ ವಿಧಾನಸಭೆ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಅಧಿವೇಶನದ ನಡವಳಿಯ ಪುಸ್ತಕಗಳು ಪರಾಮರ್ಶೆಗಾಗಿ ಲಭ್ಯವಿರುತ್ತದೆ.

ಮಾನ್ಯ ಸದಸ್ಯರು ತಮ್ಮ ಕಾರ್ಯನಿರ್ವಹಣೆಗೆ ಅವಶ್ಯಕವಿರುವ ಮೇಲ್ಕಂಡ ಮಾಹಿತಿಗಳನ್ನು ಬಯಸಿದಲ್ಲಿ ಅದರ ಛಾಯಾ ಪ್ರತಿಯನ್ನು ಒದಗಿಸಲಾಗುವುದು.

ಇ. ಗಣಕ ಕೇಂದ್ರ

ಕರ್ನಾಟಕ ವಿಧಾನ ಸಭೆಯ ಗಣಕ ಕೇಂದ್ರವು ಕೊಠಡಿ ಸಂಖ್ಯೆ:29ರಲ್ಲಿ ಕಾರ್ಯನಿರ್ವಹಿಸುತ್ತಿದೆ. ಗಣಕ ಕೇಂದ್ರದ ವತಿಯಿಂದ ಅಂತರ್ಜಾಲ www.kla.kar.nic.in ತಾಣವನ್ನು ನಿರ್ವಹಿಸುತ್ತಿದ್ದು, ವಿಧಾನ ಸಭೆಯ ಸಂಪೂರ್ಣ ಕಾರ್ಯಚಟುವಟಿಕೆಗಳ ವಿವರಗಳನ್ನು ಒದಗಿಸಲಾಗಿದೆ. ಮಾನ್ಯ ಸದಸ್ಯರಿಗೆ ಇ-ಮೇಲ್ ವಿಳಾಸಗಳನ್ನು ಒದಗಿಸಲಾಗಿದ್ದು, ಇದರ ನಿರ್ವಹಣೆಗೆ ಸಂಬಂಧಿಸಿದಂತೆ ಸಿಬ್ಬಂದಿಯವರಿಂದ ಪೂರ್ಣ ಸಲಹೆ, ಸಹಕಾರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು. ಮಾನ್ಯ ಸದಸ್ಯರು ತಮ್ಮ ಕರ್ತವ್ಯ ನಿರ್ವಹಣೆಗೆ ಅನುಕೂಲವಾಗುವಂತಹ ಮಾಹಿತಿಗಳನ್ನು ಹಾಗೂ ಅಂತರ್ಜಾಲಗಳಲ್ಲಿ ದೊರಕುವ ಮಾಹಿತಿಗಳನ್ನು ಈ ಗಣಕ ಕೇಂದ್ರದಿಂದ ಪಡೆಯಬಹುದಾಗಿದೆ. ಅಧಿವೇಶನದ ಸಮಯದಲ್ಲಿ ಕೆಳಕಂಡ ಸೌಲಭ್ಯಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುತ್ತಿದೆ;

1. ಅಧಿವೇಶನ ಪ್ರಾರಂಭದ ಅಧಿಸೂಚನೆ, ತಾತ್ಕಾಲಿಕ ಕಾರ್ಯಕ್ರಮದ ಪಟ್ಟಿ ಹಾಗೂ ಲಘು ಪ್ರಕಟಣೆಯನ್ನು ಇ-ಮೇಲ್ ಮುಖಾಂತರ ಸದಸ್ಯರಿಗೆ ಕಳುಹಿಸಲಾಗುತ್ತದೆ.
2. ಅಧಿವೇಶನ ಕಾರ್ಯಕಲಾಪಗಳ ಪಟ್ಟಿಯನ್ನು ಹಿಂದಿನ ದಿನದಂದು ಅಂತರ್ಜಾಲ ತಾಣದಲ್ಲಿ ಅಳವಡಿಸಲಾಗುತ್ತದೆ.
3. ಪ್ರಶ್ನೆಗಳ ಬ್ಯಾಲೆಟ್ ನಡೆದ ನಂತರ ಚುಕ್ಕೆ ಗುರುತಿನ/ಚುಕ್ಕೆ ರಹಿತ ಪ್ರಶ್ನೆಗಳ ಪಟ್ಟಿಯನ್ನು ಅಂತರ್ಜಾಲ ತಾಣದಲ್ಲಿ ಅಳವಡಿಸಲಾಗುತ್ತದೆ.
4. ಚುಕ್ಕೆ ಗುರುತಿನ ಪ್ರಶ್ನೆ ಇರುವ ಸದಸ್ಯರಿಗೆ ಹಿಂದಿನ ದಿನ ಎಸ್.ಎಂ.ಎಸ್ ಮೂಲಕ ಮಾಹಿತಿಯನ್ನು ಒದಗಿಸಲಾಗುತ್ತದೆ.
5. ನಿಯಮ 351ರ ಮೇರೆಗೆ ಮಾನ್ಯ ಸದಸ್ಯರು ಕೋರಿರುವ ವಿವರವನ್ನು ಹಿಂದಿನ ದಿನ ಅಂತರ್ಜಾಲ ತಾಣದಲ್ಲಿ ಅಳವಡಿಸಲಾಗುತ್ತದೆ.
6. ವಿಧಾನಸಭೆಯ ಕಾರ್ಯಕಲಾಪಗಳ ನಡವಳಿಯನ್ನು ಮಾರನೇ ದಿನ ಅಂತರ್ಜಾಲ ತಾಣದಲ್ಲಿ ಅಳವಡಿಸಲಾಗುತ್ತದೆ.(ತಿದ್ದುಪಡಿಯಾಗದ ಮತ್ತು ಪರಾಮರ್ಶೆಗಾಗಿ ಮಾತ್ರ)

ವಿಧಾನಸಭೆಯ ಸಭಾಂಗಣ ಹಾಗೂ ಶಾಸಕರ ಭವನದ ಮೊಗಸಾಲೆಗಳಲ್ಲಿ ಗಣಕ ಯಂತ್ರಗಳನ್ನು ಅಳವಡಿಸಲಾಗಿದ್ದು, ಇದರಲ್ಲಿ ಇಂಟರ್ ನೆಟ್ ಸೌಲಭ್ಯವನ್ನು ಒದಗಿಸಲಾಗಿದೆ. ಈ ಬಗ್ಗೆ

ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಗಣಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಈ. ಸೂಚನಾ ಪತ್ರ ಶಾಖೆ

ವಿಧಾನಸೌಧದ ಮೊದಲನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ:130ರಲ್ಲಿ ವಿಧಾನಸಭೆಯ ಸೂಚನಾ ಪತ್ರ ಶಾಖೆಯಿದ್ದು, ಈ ಶಾಖೆಯಲ್ಲಿ ಮಾನ್ಯ ಸದಸ್ಯರು ಪರಾಮರ್ಶಿಸಲು ಈ ಕೆಳಕಂಡ ವರದಿಗಳು ಲಭ್ಯವಿರುತ್ತದೆ:

1. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು.
2. ಸದಸ್ಯರ ಕೈಪಿಡಿ.
3. ಲೆಟರ್ ಪ್ಯಾಡ್
4. ಪ್ರೇಕ್ಷಕರ ವೇದಿಕೆಗೆ ಪ್ರವೇಶ ಪಡೆಯುವ ಅರ್ಜಿ.
5. ಸದಸ್ಯರ ವಿಳಾಸ ಪಟ್ಟಿ (13ನೇ ಮತ್ತು 14ನೇ ವಿಧಾನಸಭೆ)
6. ಸಭಾಧ್ಯಕ್ಷರ ಅಭಿಪ್ರಾಯಗಳು ಮತ್ತು ತೀರ್ಪುಗಳು
7. ಆಯವ್ಯಯ ಪುಸ್ತಕ (2015-16, 2016-17)
8. ಆಯವ್ಯಯಕ್ಕೆ ಸಂಬಂಧಿಸಿದ ಸಂಪುಟಗಳು (2015-16, 2016-17)
9. ಸರ್ಕಾರದ ಪ್ರತಿ ಇಲಾಖೆಗಳ ವಾರ್ಷಿಕ ವರದಿ ಮತ್ತು ನಿರ್ವಹಣಾ ಮುಂಗಡ ಪತ್ರಗಳು (2015-16, 2016-17)
10. ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ (2014-15, 2015-16)
11. ಕಾವೇರಿ ನದಿಯ ಜಲವಿವಾದ ತೀರ್ಪಿನ ಪ್ರತಿಗಳು.
12. ರಾಜ್ಯಪಾಲರ ಭಾಷಣದ ಪ್ರತಿಗಳು. (2014, 2015, 2016)
13. ಸದಸ್ಯರ ಪರಿಚಯ ಪುಸ್ತಕ (13ನೇ ಮತ್ತು 14ನೇ ವಿಧಾನಸಭೆ)
14. ಕರ್ನಾಟಕ ಅಂಕಿಅಂಶಗಳ ನೋಟ (2ವರ್ಷ)

15. ಕರ್ನಾಟಕ ಸರ್ಕಾರದ ಸ್ವಾಮ್ಯ ಕಂಪನಿಗಳ ವಾರ್ಷಿಕ ವರದಿ (2ವರ್ಷ)
16. ಜಿಲ್ಲಾ ಪಂಚಾಯಿತಿಗಳ ವಾರ್ಷಿಕ ವರದಿ (2ವರ್ಷ)
17. ನಗರಾಭಿವೃದ್ಧಿ ಪ್ರಾಧಿಕಾರಗಳ ವಾರ್ಷಿಕ ವರದಿ (2ವರ್ಷ)
18. ವಿಶ್ವವಿದ್ಯಾಲಯಗಳ ವಾರ್ಷಿಕ ವರದಿ (2ವರ್ಷ)
19. ಕರ್ನಾಟಕ ವಿಧಾನಸಭೆಯ ನಡವಳಿಕೆಗಳು (2ವರ್ಷ)

ಮೇಲ್ಕಂಡ ಸೌಲಭ್ಯಗಳನ್ನು ಉಭಯ ಸದನಗಳ ಮಾನ್ಯ ಸದಸ್ಯರು ಸದ್ಬಳಕೆ ಮಾಡಿಕೊಳ್ಳಬಹುದೆಂದು ಈ ಮೂಲಕ ತಿಳಿಸಲಾಗಿದೆ.

ಎಸ್. ಮೂರ್ತಿ

ಕಾರ್ಯದರ್ಶಿ (ಪ್ರ)

ಗೆ:

ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.